**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ.ನಂಃ201/ 2022**

**ಚಾಸಾ-5 ಪ್ರಾಸಾ-3**

| | | |
|---|---|---|
| ಸಾಕ್ಷಿದಾರರ ಹೆಸರು | : | ಬೋರಮ್ಮ |
| ಗಂಡನ ಹೆಸರು | : | ದೊಡ್ಡಚೆನ್ನಯ್ಯ |
| ವಯಸ್ಸು | : | 60 |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ನಾಗಲಾಪುರ ಗ್ರಾಮ |

**ದಿನಾಂಕಃ 07.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ ಅಭಿಯೋಜನೆಯ ಪರವಾಗಿಃ-**

ಚಾಸಾ-4 ನನ್ನ ಗಂಡ. ನನಗೆ 4 ಜನ ಮಕ್ಕಳು. ಚಾಸಾ-6 ನನ್ನ ಮಗ. ಚಾಸಾ-8 ಮತ್ತು 9 ಗೊತ್ತು. ಚಾಸಾ-7 ಮತ್ತು 10 ಗೊತ್ತಿಲ್ಲ. ಚಾಸಾ-1 ನನ್ನ ಮೂರನೇ ಮಗಳು. 1 ನೇ ಆರೋಪಿ ನನ್ನ ಅಳಿಯ. ಉಳಿದವರು ನಮ್ಮ ಬೀಗರು ಮತ್ತು ಅವರ ಮಕ್ಕಳು. ನನ್ನ ಮಗಳನ್ನು ಸುಮಾರು 15 ವರ್ಷಗಳ ಹಿಂದೆ ಒಂದನೆ ಆರೋಪಿಗೆ ಮದುವೆ ಮಾಡಿಕೊಟ್ಟಿದ್ದೆವು. ನನ್ನ ಮಗಳಿಗೆ ಒಂದು ಗಂಡು ಮತ್ತು ಹೆಣ್ಣು ಮಗು ಇದೆ. 1 ನೇ ಆರೋಪಿ ಹಾಸನದಲ್ಲಿ ಪಾನಿಪುರಿ ಉದ್ಯೋಗ ಮಾಡುತ್ತಿದ್ದ. ಆ ಸಮಯದಲ್ಲಿ ನನ್ನ ಮಗಳು ಒಂದನೇ ಆರೋಪಿಯೊಂದಿಗೆ ಮಲ್ನಾಡ್ ಕಾಲೇಜು ಹತ್ತಿರ ಬಾಡಿಗೆ ಮನೆ ಮಾಡಿಕೊಂಡಿದ್ದರು. ಹಾಸನಕ್ಕೆ ಬರುವ ಮೊದಲು ನನ್ನ ಮಗಳು ಮತ್ತು ಒಂದನೇ ಆರೋಪಿ ಚಿಕ್ಕಭಾಗನಹಳ್ಳಿಯಲ್ಲಿ ವಾಸವಾಗಿದ್ದರು. ಆಗ ಆರೋಪಿತರೆಲ್ಲರೂ ಮತ್ತು ನನ್ನ ಮಗಳು ಆ ಮನೆಯಲ್ಲಿ ವಾಸವಾಗಿದ್ದರು. ಭಾಗನಹಳ್ಳಿಯಲ್ಲಿ ನನ್ನ ಮಗಳೊಂದಿಗೆ ಆರೋಪಿತರು ಜಗಳವಾಡುತ್ತಿದ್ದರು. ನನ್ನ ಮಗಳಿಗೆ ಅವಳ ಅತ್ತೆ ಮಾವ ಮತ್ತು ನಾದಿನಿ ಮನೆ ಕೆಲಸ ಬರುವುದಿಲ್ಲ ಮತ್ತು ಏನಾದರೂ ತಪ್ಪು ಹುಡುಕಿ ಜಗಳ ಮಾಡುತ್ತಿದ್ದರು. ಈ ವಿಚಾರವಾಗಿ ಗೊರೂರು ಪೋ. ಠಾಣೆಗೆ ದೂರು ನೀಡಿದ್ದೆವು. ಅಲ್ಲಿ ನಮ್ಮೆಲ್ಲರನ್ನು

ಕರೆಸಿ ರಾಜಿ ಮಾಡಿಸಿ ವಾಪಸ್ಸು ಕಳುಹಿಸಿದರು. ನಂತರ ಮತ್ತೆ ಅದೇ ರೀತಿ ಜಗಳ ಶುರು ಮಾಡಿದರು. ನಂತರ ನನ್ನ ಮಗಳು ಮಹಿಳಾ ಪೋ.ಠಾಣೆಗೆ ದೂರು ನೀಡಿದ್ದಳು. ಅಲ್ಲಿ ಕೂಡ ರಾಜಿ ಮಾಡಿ ಕಳುಹಿಸಿಕೊಟ್ಟರು. ಅಲ್ಲಿ ಮತ್ತೆ ಜಗಳ ಶುರು ಮಾಡಿದರು ನಂತರ ನನ್ನ ಮಗಳು ಮತ್ತು ಒಂದನೇ ಆರೋಪಿ ಮಕ್ಕಳೊಂದಿಗೆ ಹಾಸನಕ್ಕೆ ಬಾಡಿಗೆ ಮನೆಗೆ ಬಂದರು. ಅಲ್ಲಿಯೂ ಸಹ ಒಂದನೇ ಆರೋಪಿ ಮನೆಯವರು ನನ್ನ ಮಗ ಮನೆಗೆ ಬಂದು ಹೋದ ನಂತರ ಒಂದನೇ ಆರೋಪಿ ನನ್ನ ಮಗಳೊಂದಿಗೆ ಜಗಳ ಮಾಡೋದು ಮತ್ತು ಹೊಡೆಯೋದು ಮಾಡುತ್ತಿದ್ದರು. ನನ್ನ ಮಗಳು ಈ ವಿಚಾರವನ್ನು ಫೋನ್ ಮಾಡಿ ಹೇಳುತ್ತಿದ್ದಳು. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಒಂದನೇ ಆರೋಪಿ 2-3 ದಿನ ಮನೆಯಲ್ಲಿ ಇಲ್ಲದ ಸಮಯದಲ್ಲಿ ನನ್ನ ಮಗಳಿಗೆ ಹುಷಾರಿಲ್ಲದ ಕಾರಣ ಪಕ್ಕದ ಮನೆಯವರು ನನ್ನ ಮಗಳಿಗೆ ಚಿಕಿತ್ಸೆ ಕೊಡಿಸಿ ನನ್ನ ಮಗಳು ಬೆಳಗ್ಗೆ ಮಲಗಿರುವಾಗ ಒಂದನೇ ಆರೋಪಿ ಜಗಳ ತೆಗೆದು ಯಾಕೆ ಮಲಗಿದ್ದೀಯಾ ಅಂತ ಕೇಳಿದಾಗ ನನ್ನ ಮಗಳು ಹುಷಾರಿಲ್ಲದೆ ಮಲಗಿದ್ದೇನೆ ಯಾಕೆ ಜಗಳ ಮಾಡುತ್ತೀಯಾ ಅಂತ ಹೇಳಿದಾಗ ಒಂದನೆ ಆರೋಪಿ ನನ್ನ ಮಗಳಿಗೆ ಹೊಡೆದ ಮತ್ತು ಮನೆಯಲ್ಲಿ ಕೂಡಿ ಹಾಕಿದ್ದ. ಆಗ ನನ್ನ ಮಗಳು ಫೋನ್ ಮಾಡಿ ಹೊರಗೆ ಬಿಡುತ್ತಿಲ್ಲ ಅಂತ ಹೇಳಿದಳು. ನಾನು ಹೊಳೆನರಸೀಪುರದಿಂದ ನನ್ನ ಮಗಳ ಹತ್ತಿರ ಬಂದಾಗ ಅಕ್ಕಪಕ್ಕದ ಮನೆಯವರು ನನ್ನ ಮಗಳಿಗೆ ಒಂದನೆ ಆರೋಪಿ ಹೊಡೆಯುವುದನ್ನು ಕಿಟಕಿಯಿಂದ ನೋಡುತ್ತಿದ್ದರು. ಆಗ ನಾನು ಒಂದನೇ ಆರೋಪಿಗೆ ನನ್ನ ಮಗಳನ್ನು ಯಾಕೆ ಹೊಡೆಯುತ್ತೀಯಾ ಅಂತ ಒಂದನೇ ಆರೋಪಿಯನ್ನು ಕೇಳಿದಾಗ ನನಗೂ ಅವಾಚ್ಯ ಶಬ್ದಗಳಿಂದ ಬೈದರು. ಅದೆ ದಿನ ನನ್ನ ಮಗಳನ್ನು ಕರೆದುಕೊಂಡು ಹೋಗಿ ಮಹಿಳಾ ಪೋ. ಠಾಣೆಗೆ ದೂರು ನೀಡಿದ್ದೆವು. ಪೊಲೀಸರು ಈ ವಿಚಾವಾಗಿ ನನ್ನನ್ನು ವಿಚಾರಣೆ ಮಾಡಿಲ್ಲ. ಈಗ ನ್ಯಾಯಾಲಯದ ಮುಂದೆ ಹೇಳಿದ ವಿಚಾರವನ್ನೆ ನಾನು ಪೊಲೀಸರ ಮುಂದೆ ಹೇಳಿದ್ದೆ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ,

ಪಾಟೀಸವಾಲಿಗೆ ಅನುಮತಿ ನೀಡಿದೆ)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 22.02.2022 ರಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹಾಸನದ ಮನೆಯಲ್ಲಿರುವಾಗ ಒಂದನೇ ಆರೋಪಿತನಿಗೆ ಇತರ ಆರೋಪಿತರು ಕುಮ್ಮಕ್ಕು ನೀಡಿದ ಕಾರಣ ಒಂದನೇ ಆರೋಪಿಯು ಕುಡಿದು ಬಂದು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಎಂದು ಹೇಳಿರುತ್ತೇನೆ ಎಂದರೆ ಸರಿ. ಆನಂತರವೂ ಕೂಡ ಒಂದನೇ ಆರೋಪಿಯು ಕಿರುಕುಳ ನೀಡುತ್ತಿದ್ದ ವಿಚಾರ ನಮಗೆ ತಿಳಿದು ನಾನು, ಚಾಸಾ-4 ಮತ್ತು ಚಾಸಾ-6 ರಿಂದ 8 ರವರು ಬಂದು ಬುದ್ದಿವಾದ ಹೇಳಿರುತ್ತೇವೆ ಎಂದರೆ ಸರಿ. ಮತ್ತು ಸ್ವಲ್ಪ ದಿವಸಗಳ ನಂತರ ಒಂದನೇ ಆರೋಪಿಯು ಚಾಸಾ-1 ರವರೋಂದಿಗೆ ಚೆನ್ನಾಗಿದ್ದು, ದಿಃ 18.01.2022 ರಂದು ರಾತ್ರಿ 9.00 ಗಂಟೆಯ ಸಮಯದಲ್ಲಿ ಒಂದನೇ ಆರೋಪಿ ಕುಡಿದು ಬಂದು ನಿಮ್ಮಪ್ಪನ ಮನೆಯವರನ್ನು ಕರೆಯಿ ರಾಜಿ ಪಂಚಾಯಿತಿ ಮಾಡಿಸುತ್ತೀಯಾ ಎಂಬಿತ್ಯಾದಿ ಕೆಟ್ಟ ಶಬ್ದಗಳಿಂದ ಬೈದು ಕೈಯಿಂದ ತಲೆಗೆ, ಬಲತುಟಿಗೆ ಹೊಡೆದು ತಲೆಜುಟ್ಟನ್ನು ಹಿಡಿದು ಗೋಡೆಗೆ ಗುದ್ದಿಸಿ ಹೊಟ್ಟೆಗೆ ಒದ್ದು, ಕೈಯಿಂದ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ ಮತ್ತು ಆ ಸಂದರ್ಭದಲ್ಲಿ ಚಾಸಾ-1 ರವರು ತಪ್ಪಿಸಿಕೊಂಡಾಗ ಒಂದನೇ ಆರೋಪಿಯು ಪುನಃ ಕೆಟ್ಟ ಶಬ್ದಗಳಿಂದ ಬೈದು ನಿನ್ನನ್ನು ಕೊಲೆ ಮಾಡಿ ಇನ್ನೊಂದು ಮದುವೆಯಾಗುತ್ತೇನೆ ಎಂದು ಬೆದರಿಕೆ ಹಾಕಿದ ಬಗ್ಗೆ ಚಾಸಾ-1 ರವರು ನನಗೆ ಹೇಳಿರುತ್ತಾರೆ ಎಂದರೆ ಸರಿ.

ದಿಃ 19.01.2022 ರಂದು ಬೆಳಗ್ಗೆ 8.00 ಗಂಟೆಗೆ ಪುನಃ ಒಂದನೇ ಆರೋಪಿಯು ಚಾಸಾ-1 ರವರಿಗೆ ಬೈದು ಹಿಂಸೆ ನೀಡಿ ಕೊಲೆ ಬೆದರಿಕೆ ಹಾಕಿದ್ದಾರೆ ಎನ್ನುವ ವಿಚಾರವನ್ನು ಚಾಸಾ-1 ರವರು ತಿಳಿಸಿರುತ್ತಾರೆ ಎಂದರೆ ನಿಜ. ಈ ಕುರಿತು ನನ್ನ ಮಗಳು ಪೋ. ಠಾಣೆಯಲ್ಲಿ ದೂರು ನೀಡಿದ್ದಾಳೆ ಎಂದರೆ ಸರಿ.

**<u>ಪಾಟೀಸವಾಲುಃ ಆಪಾದಿತರ ಪರ ಶ್ರೀ ಎ ಜೆ ಆರ್ ವಕೀಲರಿಂದಃ</u>**

ನನ್ನ ಮಗಳ ಮದುವೆ ಮಾಡಿ 10-11 ವರ್ಷವಾಗಿದೆ. ಮದುವೆಯಾಗಿ ಮೊದಲು ನನ್ನ ಅಳಿಯ ಮಗಳು ಚೆನ್ನಾಗಿಯೇ ಇದ್ದರು ಎಂದರೆ ಸರಿ. ನನ್ನ ಮಗಳು ಒಂದನೇ ಆರೋಪಿ ಅವಳನ್ನು ಕೂಡಿ ಹಾಕಿ ಹೊಡೆಯುತ್ತಿದ್ದಾರೆ ಅಂತ ಬೆಳಗ್ಗೆ ಹೇಳಿದ್ದಳು. 10 ವರ್ಷದಿಂದಲೂ ನನ್ನ ಮಗಳು ಒಂದನೇ ಆರೋಪಿ ಅವಳಿಗೆ ಹೊಡೆಯುತ್ತಿದ್ದ ವಿಚಾರವನ್ನು ಹೇಳುತ್ತಿದ್ದಳು. ನನ್ನ ಮಗಳಿಗೆ ಒಂದನೇ ಆರೋಪಿ ಹೊಡೆದಿದ್ದನ್ನು ನಾನು ನೋಡಿದ್ದೇನೆ. ಆ ದಿನ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಸರಿ ಹೋಗುತ್ತಾರೆ ಅಂತ ತಿಳಿದು ಸುಮ್ಮನಾದೆ ಅಂತ ಹೇಳುತ್ತಾರೆ. ನನ್ನ ಮಗಳು ಮತ್ತು ಒಂದನೇ ಆರೋಪಿ ಚೆನ್ನಾಗಿದ್ದರು ಸಹ ನಾನೇ ನನ್ನ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿ ಆರೋಪಿ ತೊಂದರೆ ಕೊಡುತ್ತಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಬೀಗರಿಗೆ ಹುಷಾರಿಲ್ಲದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಈಗ್ಗೆ 1 ವರ್ಷ 2 ತಿಂಗಳ ಹಿಂದಿನಿಂದ ಅವರಿಗೆ ಹುಷಾರಿಲ್ಲ. ನನ್ನ ಬೀಗರಿಗೆ ಹುಷಾರಿಲ್ಲದ ವಿಚಾರ ಗೊತ್ತಾಗಿ ಅವಳಿಗೆ ಅವರ ಸೇವೆ ಮಾಡಬೇಕಾಗುತ್ತದೆ ಅಂತ ತಿಳಿದು ನಮ್ಮ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. 5 ಮತ್ತು 6ನೇ ಆರೋಪಿತರು ಬೇರೆ ವಾಸವಾಗಿದ್ದಾರೆ ಎಂದರೆ ಸರಿ. ನಮ್ಮ ಅಳಿಯ ಮತ್ತು ಮಗಳು ಹಾಸನದಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿ. ಆದರೆ ಉಳಿದ ಆರೋಪಿತರು ನಮ್ಮ ಮಗಳ ಮನೆಗೆ ಬಂದು ಹೋಗಿ ಮಾಡುತ್ತಿದ್ದರು. ನಾನು ಹೇಳಿದಂತೆ ಯಾವುದೇ ಘಟನೆ ನಡೆಯದೆ ಇದ್ದರೂ ಸಹ ನನ್ನ ಮಗಳಿಗೆ ಅತ್ತೆ ಮಾವನ ಸೇವೆ ಮಾಡಬೇಕಾಗುತ್ತದೆ ಅಂತ ತಿಳಿದು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಆರೋಪಿತರು ಒಂದನೇ ಆರೋಪಿಯಿಂದ ಪ್ರತ್ಯೇಕವಾಗಿ ವಾಸವಾಗಿದ್ದು, ಅವರು ನಾನು ಹೇಳಿದಂತೆ ಚಾಡಿ ಹೇಳಿಕೊಡತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀರಣಗೊಳಿಸಿ ಮುದ್ರಿಸಲಾಯಿತು.)**

ಓ ಹೇ ಕೇ ಸ ಇದೆ

(ರೂಪಾ ಆರ್. ಕುಲಕರ್ಣಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.